†ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ. ಎರಡು ಕೋಟಿ ರೂಪಾಯಿಗಳು ಈ ರಸ್ತೆಗಳನ್ನು ಮಾಡುವುದಕ್ಕೆ ಬೇಕಾಗುವುದರಿಂದ ಈಗ ಇದನ್ನೂ ಮಾಡುವುದಕ್ಕಾಗುವುದಿಲ್ಲ ಎಂದರೆ, ಇವರಿಗೆ ನಾನು ಏನು ಹೇಳಬೇಕೋ ಗೊತ್ತಾಗುತ್ತಿಲ್ಲ. ಅಲ್ಲಿ ಆಕ್ಸಿಡೆಂಟ್‌ಗಳು ಆಗುವುದಿಲ್ಲ ವಾದ್ದರಿಂದ ರಸ್ತೆಗಳು ಈಗಿರುವಷ್ಟೇ ಸಾಕು ಎಂದು ಹೇಳುತ್ತಿದ್ದಾರೆ. ಇವರು ನಂಜನಗೂಡಿನ ಕಡೆಗೆ ಬರುವುದಿಲ್ಲವಾದ್ದರಿಂದ ಅಲ್ಲಿನ ರಸ್ತೆಗಳು ಇವರಿಗೆ ಬೇಕಾಗಿಲ್ಲ. ಹಾಸನದ ಕಡೆ ಇವರು ಹೋಗುವುದರಿಂದ ಅಲ್ಲಿಗೆ ಮಾತ್ರ ರಸ್ತೆಗಳು ಚೆನ್ನಾಗಿರಬೇಕು. ಹಿಂದೆ ಮಾನ್ಯ ಸದಸ್ಯರಾಗಿದ್ದ ಮಹದೇವ್‌ರವರು ಈ ಜಾಗದಲ್ಲಿ ಆಕ್ಸಿಡೆಂಟ್‌ಗಳು ಆಗುವುದರಿಂದ ರಸ್ತೆಗಳನ್ನು ಜೋಡಿ ರಸ್ತೆ ಮಾಡಬೇಕೆಂದು ಪದೇ ಪದೇ ಕೇಳುತ್ತಿದ್ದರು. ಈ ರಸ್ತೆ ಹೋಗುವ ಜಾಗದಲ್ಲಿ ಸುಜಾತ ರೈಸ್ ಮಿಲ್ ಇದೆ. ಅದರ ಕಾರ್ಮಿಕರು ಹಗಲೂ ರಾತ್ರಿ ಓಡಾಡುತ್ತಿರುತ್ತಾರೆ, ರೈಲ್ವೆ ನಿಲ್ದಾಣ ಇದೆ, ತಾಲ್ಲೂಕು ಕಚೇರಿ ಇದೆ, ತಾಲ್ಲೂಕು ಅಭಿವೃದ್ಧಿ ಮಂಡಳಿ ಕಚೇರಿ ಇದೆ, ಜೂನಿಯರ್ ಕಾಲೇಜ್ ಇದೆ, ಪ್ರೌಢ ಶಾಲೆ ಇದೆ, ಹಾಸ್ಟೆಲ್‌ಗಳು ಇವೆ. ಮಕ್ಕಳ ಕಾನ್ವೆಂಟ್ ಇದೆ. ಇಷ್ಟೆಲ್ಲಾ ಇರುವಾಗ ಅಲ್ಲಿ ರಸ್ತೆ ಮಾಡುವ ಅವಶ್ಯಕತೆ ಇಲ್ಲವೆಂದರೆ ಹೇಗೆ? ಹಾಸನಕ್ಕೆ ಇವರು ಹೋಗುವ ರಸ್ತೆ ಮಾತ್ರ ಚೆನ್ನಾಗಿದ್ದರೆ ಸಾಕೆ? ಇದು ಯಾವ ನ್ಯಾಯ? ಈ ರಸ್ತೆಯಲ್ಲಿ ವಾರಕ್ಕೆ ಒಂದಾದರೂ ಆಕ್ಸಿಡೆಂಟ್ ಆಗುತ್ತಾ ಇರುತ್ತದೆ. ಈ ರಸ್ತೆಯ ಪಕ್ಕದಲ್ಲಿ ವಾಹನಗಳು ಜಾರಿಕೊಂಡು ಹೋಗಿ ಬಿಡುತ್ತವೆ. ಬೇಕಾದರೆ ಅಂಕಿ ಅಂಶಗಳನ್ನು ತೆಗೆಸಿ ನೋಡಿ ಇದುವರೆಗೆ ಇಷ್ಟು ಆಕ್ಸಿಡೆಂಟ್ ಆಗಿದೆ ಎಂಬುದು ಗೊತ್ತಾಗುತ್ತದೆ. ಈ ರಸ್ತೆ ಮಾಡಬೇಕಾದರೆ ಎರಡು ಕೋಟಿ ರೂಪಾಯಿಗಳು ಬೇಕಾಗುವುದರಿಂದ ಈಗ ರಸ್ತೆಯನ್ನು ಮಾಡುವುದಕ್ಕಾಗುವುದಿಲ್ಲ ಎನ್ನುವುದು ಸರಿಯಲ್ಲ. ರಸ್ತೆ ಮಾಡಿಸುವುದಕ್ಕೆ ನಾವು ದುಡ್ಡು ಕೊಡುವುದಕ್ಕಾಗುವುದಿಲ್ಲ. ಸರ್ಕಾರವೇ ದುಡ್ಡನ್ನು ಹೊಂದಿಸಿಕೊಳ್ಳಬೇಕು. ಆದ್ದರಿಂದ, ಆದಷ್ಟು ಬೇಗ ಈ ರಸ್ತೆಯನ್ನು ಜೋಡಿ ರಸ್ತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯಿಣಿಯವರಿಗೆ ಒಪ್ಪಿಗೆಯಾಗುವಂತೆ ಉತ್ತರ ಕೊಡಿ.

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಇವರಿಗೆ ಒಪ್ಪಿಗೆಯಾಗುವ ಹಾಗೆ ಉತ್ತರ ಕೊಡಬೇಕಾದರೆ ಮೊದಲು ಹಣ ಬೇಕಾಗುತ್ತದೆ. ರಸ್ತೆ ಅಗಲ ಇಲ್ಲದೇ ಇರುವುದರಿಂದ ಆಕ್ಸಿಡೆಂಟ್ ಆಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಆಕ್ಸಿಡೆಂಟ್ ಆಗಿರುವುದಕ್ಕೆ ರಸ್ತೆಯ ಅಗಲವ ಕಾರಣವಲ್ಲ. ಅಜಾಗರೂಕತೆಯಿಂದ ವಾಹನವನ್ನು ನಡೆಸಿರುವುದರಿಂದ ಆಕ್ಸಿಡೆಂಟ್ ಆಗಿದೆಯೆಂದು ವರದಿ ಬಂದಿದೆ. ಜೋಡಿ ರಸ್ತೆ ನಿರ್ಮಾಣ ಮಾಡಬೇಕೆಂದು ಹಿಂದಿನಿಂದ ಕೇಳುತ್ತಿದ್ದಾರೆ ಎನ್ನುವುದು ನಿಜ. ನಂಜನಗೂಡಿನಲ್ಲೂ ಸಂಚಾರ ಜಾಸ್ತಿ ಇದೆ. ಆದರೆ, ರಸ್ತೆ ಮಾಡುವುದಕ್ಕೆ ಹಣ ಬೇಕಲ್ಲ. ಇನ್ನೂ ಸ್ವಲ್ಪ ರಸ್ತೆಯನ್ನು ಅಗಲ ಮಾಡಿ ಸರಿಪಡಿಸುವುದಕ್ಕೆ ಇಂಜಿನೀಯರ್‌ರವರಿಗೆ ಹೇಳುತ್ತೇನೆ. ತಾವೂ ಬೇಕಾದರೆ ನಮ್ಮ ಜೀಪಿನಲ್ಲಿ ಬನ್ನಿ ನಾವೂ ನೀವು ಹೋಗಿ ಅಲ್ಲಿ ನೋಡಿಕೊಂಡು ಬರೋಣ. ಜೋಡಿ ರಸ್ತೆಯನ್ನು ಮಾಡಬೇಕೆಂದು ತಾವು ಏನು ಸೂಚನೆಯನ್ನು ಕೊಟ್ಟಿದ್ದೀರೋ ಅದನ್ನು ಮಾಡಿಸುವುದಕ್ಕೆ ಸಧ್ಯಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ಶ್ರೀಯುತರುಗಳಾದ ವೇದಾಂತ ಹೆಬ್ಬಿಗ, ಪಿ.ಎಂ. ಚಿಕ್ಕಬೋರಯ್ಯ, ಮತ್ತು ಬಿ.ಜಿ. ಕೊಟ್ರಪ್ಪನವರು ಗಮನ ಸೆಳೆಯುವ ಸೂಚನೆಯನ್ನು ಮಾನ್ಯ ಮುಖ್ಯ ಮಂತ್ರಿಯವರು ಬಂದ ಮೇಲೆ ತೆಗೆದುಕೊಳ್ಳಲಾಗುತ್ತದೆ. ನಿಮ್ಮ ಗಮನ ಸೆಳೆಯುವ ಸೂಚನೆಗೆ ಮುಖ್ಯ ಮಂತ್ರಿಯವರು ಉತ್ತರ ಕೊಡಬೇಕಾಗಿರುವುದರಿಂದ ಅದನ್ನು ಮುಂದಕ್ಕೆ ಹಾಕಲಾಗಿದೆ.

2) ಕಲ್ಘಟಗಿಯ ಕಾಂಗ್ರೆಸ್ ಅಧ್ಯಕ್ಷರ ಕಾರನ್ನು ಸುಟ್ಟು ಹಾಕಿರುವುದು

SRI M. MALLIKARJUNA KHARGE.—Sir, I call the attention of the Minister for Home to the burning of car belonging to District Congress President, Kalgattagi, Dharwad.

ಶ್ರೀ ಆರ್.ಎಲ್. ಜಾಲಪ್ಪ (ಗೃಹ ಸಚಿವರು).—ದಿನಾಂಕ ೧೩.೮.೮೭ರಂದು ಶ್ರೀ ಬಾಬು ಖಾಸಿಂ ಸಾಬ್‌ರವರು ಕಲಘಟಗಿ ಪೋಲೀಸ್ ಠಾಣೆಯಲ್ಲಿ ಶ್ರೀ ಎ.ಎಸ್. ಧಾವಲಿ ಮತ್ತು ಅವರ ಮಗ ಶ್ರೀ ಭೂಪಾಲ್ ಗೌಡ ಹಾಗೂ ಇನ್ನಿಬ್ಬರು ತಂಬೂರು ಗ್ರಾಮದ ಹತ್ತಿರ ನಿಲ್ಲಿಸಿದ ಕಾರಿಗೆ (ನಂಬರ್

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಎಂಇಜಡ್ ೧೧೨೯) ಬೆಂಕಿಯನ್ನು ಹಚ್ಚಿದರು ಮತ್ತು ಗಾಳಿಯಲ್ಲಿ ಗುಂಡು ಹಾರಿಸಿದರು ಎಂದು ದೂರನ್ನು ಕೊಟ್ಟರು. ಇದನ್ನು ಕ್ರೈಂ ನಂ. ೮೯/೮೭ ಐಪಿಸಿಯ ಕಲಂ ೧೪೭, ೧೪೮, ೪೩೫ ರೆಡ್‌ವಿತ್ ಕಲಂ ೧೪೯ ಮತ್ತು ಇಂಡಿಯನ್ ಆರ್ಮ್ಸ್ ಆಕ್ಟ್ ೨೫ರ ಪ್ರಕಾರ ನೋಂದಾಯಿಸಲಾಗಿದೆ. ತನಿಖೆ ಕಾಲದಲ್ಲಿ ಎಲ್ಲಾ ೬ ಜನ ಅಪರಾಧಿಗಳನ್ನು ದಸ್ತಗಿರಿ ಮಾಡಿ, ಪ್ರಶ್ನಿಸಿ, ನಂತರ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಈ ಪ್ರಕರಣದಲ್ಲಿ ಇಬ್ಬರು ಸಾಕ್ಷಿಗಳಿದ್ದರೆಂದೂ ಮತ್ತು ಘಟನೆ ನಡೆದಾಗ ಇವರು ಕಾರಿನಲ್ಲಿದ್ದರೆಂದೂ ತಿಳಿದು ಬಂದಿದೆ. ಅವರಿಗೆ ಯಾವುದೇ ತರಹದ ಸುಟ್ಟ ಗಾಯಗಳಾಗಿಲ್ಲ. ಇಲ್ಲಿಯವರೆಗೆ ನಡೆದ ತನಿಖೆಯಲ್ಲಿ ದೂರಿನಲ್ಲಿ ತಿಳಿಸಿದಂತೆ ಶಸ್ತ್ರಾಸ್ತ್ರ ಬಳಕೆಯಾಗಿಲ್ಲವೆಂದು ತಿಳಿದು ಬಂದಿದೆ.

೨. ದಿನಾಂಕ ೧೬.೮.೮೭ ರಂದು ತಂಬೂರು ಗ್ರಾಮದ ಭೂಪಾಲ್‌ಗೌಡರವರ ದೂರಿನ ಮೇಲೆ ಪ್ರಕರಣವನ್ನು ಕಲಘಟಗಿ ಪೊಲೀಸ್ ಠಾಣೆಯಲ್ಲಿ ಕ್ರೈಂ. ನಂ. ೯೧/೮೭, ಐಪಿಸಿಯ ಕಲಂ ೧೪೩, ೧೪೭, ೪೧೪, ೪೧೬ ರೆಡ್‌ವಿತ್ ಕಲಂ ೧೪೯ ರಂತೆ ನೋಂದಾಯಿಸಿಕೊಳ್ಳಲಾಗಿದೆ. ಇದರ ಪ್ರಕಾರ ಶ್ರೀ ಬಾಬುಖಾಸಿಂ ಸಾಬ್ ಮತ್ತು ರಾಜೇಸಾಬ್ ಹಾಗೂ ಇನ್ನಿತರ ೪ ಜನರು ಕೊಡ್ಲಿ ಮತ್ತು ಮಚ್ಚುಗಳನ್ನು ತೋರಿಸಿ ಪಿರ್ಯಾದಿದಾರನಿಗೆ ಪ್ರಾಣಭೀತಿಯನ್ನು ಹಾಕಿರುತ್ತಾರೆ. ಆಪರಾಧಿಗಳು ಪ್ರಕರಣದಲ್ಲಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ.

೩. ಶ್ರೀ ಬಾಬು ಖಾಸಿಂ ಸಾಬ್‌ರವರು, ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ನಿವಾಸಿಯಾಗಿರುತ್ತಾರೆ. ಅವರು ಹಲವಾರು ಪ್ರಕರಣಗಳಲ್ಲಿ ಆಪರಾಧಿಗಳಾಗಿರುತ್ತಾರೆ. ಈ ಕಾರಣ ದಿಂದಾಗಿ ತಮ್ಮ ಜೀವದ ರಕ್ಷಣೆಗೋಸ್ಕರ ಈಗ ಕಲಘಟಗಿ ಎಂಬ ಊರಿನಲ್ಲಿ ೮-೧೦ ವರ್ಷಗಳಿಂದ ವಾಸವಾಗಿರುತ್ತಾರೆ.

೪. ಗ್ರಾಮದಲ್ಲಿ ಶಾಂತಿಯನ್ನು ಕಾಪಾಡಲು ಪೊಲೀಸ್ ಬಂದೋಬಸ್ತನ್ನು ವ್ಯವಸ್ಥೆಗೊಳಿಸ ಲಾಗಿದೆ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಇದರಲ್ಲಿ ಇವರು ಬಾಬುಕಾಸಿಂಸಾಬ್ ಅವನು ಅಪರಾಧಿ, ಅನೇಕ ಕೇಸ್‌ಗಳಲ್ಲಿ ಇದ್ದಾನೆ ಎಂಬುದನ್ನು ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಆದರೆ ಇದರ ಹಿನ್ನೆಲೆ ಏನು ಎಂದರೆ ಇದು ರಾಜಕೀಯ ದುರುದ್ದೇಶದಿಂದ ಕೂಡಿದೆ ಅಲ್ಲಿ ಏನಾಗಿದೆ ಅಂದರೆ, ಅತನು ನನ್ನ ಕಾರು ಸುಟ್ಟ ಹೋಗಿದೆ ಎಂದು ದೂರು ಕೊಟ್ಟ ಮೇಲೆ, ಪುನಃ ಕೇಸ್ ಹಾಕಿದ್ದಾರೆ. ಎಷ್ಟೋ ಕಡೆ ಈ ರೀತಿಯಲ್ಲಿ ನಡೆಯುತ್ತವೆ, ಪ್ರಭಾವದ ಮೂಲಕ ಅನೇಕ ಜನ ತಮ್ಮ ಕೆಲಸ ಮಾಡಿಸಿಕೊಳ್ಳುತ್ತಾರೆ. ಅವರಿಗೆ ಪೊಲೀಟಿಕಲ್ ಆಫೀಸರ್ಸ್ ಇದ್ದರು ಎಂದರೆ ಇವರು ಅರ್ಜಿ ಕೊಟ್ಟ ತತ್‌ಕ್ಷಣವೇ ಇನ್ನೊಬ್ಬ ಹೋಗಿ ಕೌಂಟರ್ ಅಪ್ಲಿಕೇಷನ್ ಕೊಡುತ್ತಾನೆ. ಆಗ ಸ್ಟೇಷನ್‌ನವರು ಅವನ ಕೇಸನ್ನು ಮತ್ತು ಇವನ ಕೇಸನ್ನೂ ಕೂಡ ರಿಜಿಸ್ಟರ್ ಮಾಡಿಕೊಳ್ಳುತ್ತಾರೆ. ಇವನಿಗೆ ಬಿಟ್ಟು ಬಿಡುತ್ತಾರೆ, ಇದಕ್ಕೆ ದಯವಿಟ್ಟು ಇದನ್ನು ಪುನರ್‌ಪರಿಶೀಲಿಸಿ ? ಏಕೆಂದರೆ ಇವನು ಹಲ್ಲೆಯಾಗಿದೆ ಎಂದು ಹೇಳಿದ ಮೇಲೆ ಇನ್ನೊಬ್ಬ ಬಂದು ತನ್ನ ಮೇಲೆ ಹಲ್ಲೆ ಮಾಡಿದ್ದಾನೆ ಎಂದು ಹೇಳಿ ಕೌಂಟರ್ ಅರ್ಜಿ ಕೊಡುತ್ತಾನೆ. ಈಗ ಮೊದಲು ಅರ್ಜಿ ಕೊಟ್ಟವನಿಗೆ ಇಲ್ಲಿ ತೊಂದರೆ ಕೊಡುತ್ತಾ ಇದ್ದಾರೆ. ಕಾರು ಸುಟ್ಟದ್ದನ್ನು ಮಾನ್ಯ ವಿರೋಧಪಕ್ಷದ ನಾಯಕರು ಖುದ್ದಾಗಿ ನೋಡಿದ್ದಾರೆ. ಅವರು ತಮ್ಮ ಪ್ರವಾಸ ಕಾಲದಲ್ಲಿ ಇದನ್ನು ಕಂಡಿದ್ದಾರೆ. ಸುಮ್ಮನೆ ೧೪೭–೪೮ರಲ್ಲಿ ನಾನ್‌ಬೇಲ್ ಅಫೆನ್ಸ್ ನಲ್ಲಿ ಸಿಕ್ಕಿಸಿ ಬಿಟ್ಟು ಬಿಟ್ಟು, ಬಾಬುಕಾಸಿಂ ಸಾಬ್ ಮೇಲೆ ಪುನಃ ೧೪೩–೪೭ನೇ ಕೇಸ್‌ನ್ನು ಹಾಕಿದ್ದಾರೆ. ಇವನಿಗೆ ತೊಂದರೆ ಕೊಡಬೇಕೆನ್ನುವ ದೃಷ್ಟಿಯಿಂದ ಹೀಗೆ ಮಾಡುತ್ತಾ ಇದ್ದಾರೆ. ಆದುದರಿಂದ ಇದರಲ್ಲಿ ಪುನರ್‌ಪರಿಶೀಲನೆಯಾಗಬೇಕೆಂದೂ ಮತ್ತು ಇದಕ್ಕೆ ಇನ್‌ವೆಸ್ಟ್‌ಗೇಶನ್ ಮಾಡಿಸಂತ್ತೀರಾ ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಕೆ.ಹೆಚ್. ಪಾಟೀಲ್‌ರವರು ಮಾತನಾಡಿ.

---

† ಈ ಟಿಪ್ಪಣಿ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಇದರಲ್ಲಿ ಯಾರೇ ಕೆಟ್ಟವರು ಇರಲಿ, ಯಾರೇ ಒಳ್ಳೆಯವರು ಇರಲಿ, ಅದು ನನಗೆ ಬೇಕಾಗಿಲ್ಲ. ನಮಗೆ ಬೇಕಾದುದು ಇಲ್ಲಿ ಕಾಷಿಂ ಸಾಬ್ ಪೋಲೀಸ್ ಸ್ಟೇಷನ್‌ಗೆ ಹೋಗಿ ಒಂದು ಫಿರ್ಯಾದನ್ನು ಕೊಟ್ಟಿದ್ದಾನೆ. ಅಲ್ಲಿಯ ಎಸ್.ಐ. ಮೇಲೆ ಆ ಫಿರ್ಯಾದು. ಆದರೆ ಅದರ ಬಗ್ಗೆ ಇದೂತನಕ ಏನೂ ವಿಚಾರಣೆ ಆಗಲಿಲ್ಲ. ಯಾರೇ ಆಗಲಿ ಒಂದು ಫಿರ್ಯಾದು ಕೊಟ್ಟ ಮೇಲೆ ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇವನು ಧಾರವಾಡದ ಎಸ್.ಪಿ.ಯವರಿಗೆ ದೂರು ಕೊಟ ರೂ ಕೂಡ ಅವರು ಏನೂ ಕ್ರಮವನ್ನು ಇದೂತನಕ ತೆಗೆದು ಕೊಂಡಿಲ್ಲ. ಹಾಗೆಂದ ಮೇಲೆ ಅಲ್ಲಿಯ ಪೋಲೀಸಿನವರು ನಿದ್ರಿಸುತ್ತಿದ್ದಾರೆಯೇ? ಹೀಗೆ ಆದರೆ ಸರಕಾರದ ಆಡಳಿತ ಹೇಗೆ ನಡೆಯುತ್ತದೆ? ಈ ಎಸ್.ಪಿ.ಯವರ ಬಗ್ಗೆ ಜನರಿಂದ ಅನೇಕ ದೂರು ಗಳು ನನಗೆ ಬರುತ್ತಿವೆ. ಇದರ ಬಗ್ಗೆ ತಾವುಗಳು ಏನು ಮಾಡುತ್ತೀರಿ?

ಶ್ರೀ ಆರ್.ಎಲ್. ಜಾಲಪ್ಪ.—ಈಗ ನಾನು ಹೇಳಿದ ೧೩-೮-೬೭ರ ಪ್ರಕರಣ ಅಲ್ಲದೇ ಬೇರೆ ಪ್ರಕರಣಗಳಲ್ಲಿ ಅರ್ಜಿಯನ್ನು ರಿಜಿಸ್ಟರ್ ಮಾಡಿಕೊಳ್ಳದಿದ್ದರೆ ನಾನು ಅದನ್ನು ವಿಚಾರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಈ ಪ್ರಕರಣದ ಬಗ್ಗೆ ನಾನು ನಿನ್ನೆ ರಾತ್ರಿ ೯ ಗಂಟೆಗೆ ಡಿ.ಐ.ಜಿ.ಯವರಿಗೆ ಫೋನ್ ಮಾಡಿ, ಅವರಿಗೆ ಖುದ್ದಾಗಿ ಕಲಘಟಕಿಗೆ ಹೋಗಿ ಪರಿಶೀಲನೆ ಮಾಡಿ ನನಗೆ ವಿಷಯ ತಿಳಿಸಲು ಹೇಳಿದ್ದೇನೆ. I have instructed the DIG to go personally to find out the facts and report to me within 4–5 days.

ಶ್ರೀ ಕೆ.ಎಸ್. ನಾಗರತ್ನಮ್ಮ.—ಬೆಳಗಾಂವಿಯ ತನಕ ಹೋಗಿದ್ದಾಗ ನಾನು ಅಲ್ಲಿಗೆ ಹೋಗಿದ್ದೆ ಅವರ ಕಾರು ಸುಟ್ಟಿದ್ದುದು ನಿಜ. ಪ್ರಕರಣದಲ್ಲಿ ಯಾರು ಕೆಟ್ಟವರು ಯಾರು ಒಳ್ಳೆಯವರು ಎಂದು ನನಗೆ ಗೊತ್ತಿಲ್ಲ. ಆದರೆ ಅವನು ಕಂಪ್ಲೇಂಟ್ ಕೊಟ್ಟಿರುವುದು ಕೂಡ ನಿಜ. ಆ ಕಂಪ್ಲೇಂಟ್ ಬಗ್ಗೆ ವಿಚಾರಣೆ ಮಾಡಿಲ್ಲದಿರುವುದು ಕೂಡ ನಿಜ. ತಾವುಗಳು ಇದನ್ನು ದಯವಿಟ್ಟು ಪರಿಶೀಲಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದರಲ್ಲಿ ತಂತ್ರ ನಡೆದಿರುವುದು ಕಾಣುತ್ತದೆ. ಇವರು ಕಾರಿನಲ್ಲಿ ಒಂದು ಕಡೆ ಹೋಗುವಾಗ ಅದು ಮುಂದೆ ಹೋಗದ ಹಾಗೆ ಗುಳಿ ತೋಡಿ ರಸ್ತೆ ಬ್ಲಾಕ್ ಮಾಡಿದ್ದರು. ಏಕೆಂದರೆ ಕಾರಿನೊಳಗೆ ಅವರು ಇದ್ದಾಗಲೇ ಕಾರು ಸಮೇತ ಬೆಂಕಿ ಹಚ್ಚಿ ಸುಟ್ಟು ಹಾಕಬೇಕೆಂಬ ಪ್ರಯತ್ನ ಅವರದು ಆದರೆ ಆಕಸ್ಮಾತ್ತಾಗಿ ಕಾರನ್ನು ಅಲ್ಲಿ ನಿಲ್ಲಿಸಿ ಖಾಸೀಂಸಾಬರು ಮತ್ತಿಬ್ಬರು ಬೇರೆ ಕಡೆ ಇದ್ದರು. ಆಮೇಲೆ ಸಿ ಮೆಎಣ್ಣೆ ಸುರಿದು ಸುಟ್ಟುಹಾಕಿದ ಕಾರಿನ ಫೋಟೋ ಗ್ರಾಫ್‌ಗಳು ನನ್ನ ಹತ್ತಿರ ಇವೆ. ದುಷ್ಕರ್ಮಿಗಳು ಬರುವುದು ತಡವಾಗಿದ್ದರಿಂದ ದುರಂತ ಸಂಭವಿಸ ಲಿಲ್ಲ. ಇವರು ಎಸ್.ಐ. ಹತ್ತಿರ ಕಂಪ್ಲೇಂಟ್ ತೆಗೆದುಕೊಂಡು ಹೊದಾಗ ಯಃಕಶ್ಚಿತ್ ಆತ ಅವರ ಮೇಲೆ ಹಿಂತಿರುಗಿ ಕೇಸ್ ರಿಜಿಸ್ಟರ್ ಮಾಡಿಕೊಂಡಿದ್ದಾನೆ. ಆ ಎಸ್.ಐ. ಇವರನ್ನು ಪೊರ್ತಿ ನಿರ್ಲಕ್ಷ್ಯ ಮಾಡಿದ್ದಾನೆ ಅಲ್ಲದೆ ಇವರ ವಿರುದ್ಧ ಧಾಳಿಗೆ ಪ್ರೊತ್ಸಾಹ ಸಹ ಕೊಟ್ಟಿದ್ದಾನೆ ಎಂಬ ಭಾವನೆ ಇದೆ. ಗುಣಿ ತೋಡಿ ಕಾರಿಗೆ ಬೆಂಕಿ ಇಟ್ಟಿದ್ದನ್ನು ತಾವು ಗಂಭೀರವಾಗಿ ಪರಿಗಣಿಸಬೇಕು. ಡಿ.ಐ.ಜಿ. ಯನ್ನೇನೋ ಕೆಳುಹಿಸುತ್ತೇನೆ ಎಂದಿರಿ. ಏಕಪಕ್ಷೀಯವಾಗಿ ನಡೆದ ಧಾಳಿಗೆ ಕಾರಣನಾದ ಎಸ್.ಐ. ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಇದು ಅಂತಹ ಗಂಭೀರ ಪರಿಸ್ಥಿತಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದು ಕ್ಲಾರಿಫಿಕೇಷನ್ನು ಮಂತ್ರಿಗಳು ಕೊಡಬೇಕು. ಖಾಷೀಂ ಸಾಬರು ಕೊಟ್ಟ ಕಂಪ್ಲೇಂಟ್ ೧೩-೮-೬೭ ಆ ದಿನ ನಡೆದ ಘಟನೆಯದು, ತದನಂತರ ಕೊಟ್ಟಿದ್ದು ೧೬-೮-೬೭ ಅಂದರೆ ನಾವು ಸಿಕ್ಕಿ ಬೀಳುತ್ತೇವೆ ಎಂದು ಅವರು ಕೊಟ ರು. ಇವರು ಕೊಟ್ಟಿದ್ದು ಮಾತ್ರ ರಿಜಿಸ್ಟರಾಗಿದೆ. ಇದರಲ್ಲಿ ದುರುದ್ದೇಶವಿರುವುದು ಸ್ಪಷ್ಟವಾಗಿದೆ. ದಯವಿಟ್ಟು ತಾವು ಇದನ್ನು ಥರೋ ಇನ್‌ವೆಸ್ಟಿಗೇಷನ್ ಮಾಡಿಸಬೇಕು.

ಶ್ರೀ ಆರ್.ಎಲ್. ಜಾಲಪ್ಪ.—೧೩-೮-೬೭ರಲ್ಲಿ ಖಾಷಿಂ ಸಾಬರು ಕೊಟ್ಟ ಕಂಪ್ಲೇಂಟ್ ಆಧಾರದ ಮೇಲೆ ೬ ಜನರನ್ನು ಪೋಲಿಸರು ಅಶಕ್ತ ತೆಗೆದುಕೊಂಡಿದ್ದು ಅದು ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಆದಾದ ಮೇಲೆ ೧೬ನೇ ತಾರೀಖು ಕೊಟ್ಟ ಕಂಪ್ಲೇಂಟನ್ನು ರಿಜಿಸ್ಟರ್ ಮಾಡದಿದ್ದರೆ ಹೇಗೆ?

SRI M. MALLIKARJUNA KHARGE.—Intentionally they have done it. I want to bring to the notice of the Home Minister...

ಶ್ರೀ ಎಂ. ವೀರಪ್ಪ ಮೊಯ್ಲಿ.—ಪೋಲಿಸರು ಮಿಸ್ಲೀಡ್ ಎಷ್ಟು ಮಾಡುತ್ತಾರೆ ಎನ್ನುವುದನ್ನು ನೋಡಿ. ಲಾಸ್ಟ್ ಫಾರಗ್ರಾಫ್‌ನಲ್ಲಿ ಬೈಲಹೊಂಗಲದಲ್ಲಿ ಅನೇಕ ಅಪರಾಧಗಳಲ್ಲಿ ಇವರು ಪಾಲ್ಗೊಂಡಿ ದ್ದರು ಎಂದಿದ್ದಾರೆ. ಅಂದರೆ ಇದು ೮-೧೦ ವರ್ಷಗಳ ಹಿಂದಿನದು. ಆಗ ಅವರು ಅಪರಾಧಿಗಳಿ

ದ್ದಾರೋ ಇಲ್ಲವೋ ಯಾರಿಗೂ ಗೊತ್ತಿಲ್ಲ. ಆದರೆ ಈಗ ಅದನ್ನು ಎಳೆಯುವ ಅಗತ್ಯ ಏನಿತ್ತು? Is it the kind of report that the Home Minister should submit to this House?

SRI R. L. JALAPPA.—We are not protecting anybody. Immedlately I came to know of the incident I rang up at 9'O clock to DIG and requested him to go to the spot personally and report back to me within 4-5 days. I have taken prompt action.

SRI M. VEERAPPA MOILY.—You have taken promopt action in deputing DIG of Police but you must ensure that proper protection to the person concerned is given.

೧೦-೩೦ ಎ.ಎಂ.

ಶ್ರೀ ಆರ್. ಎಲ್. ಜಾಲಪ್ಪ.—ನಾನು ಈ ವಿಚಾರವನ್ನು ಹೇಳಬಾರದು ಎಂದು ಅಂದು ಕೊಂಡಿದ್ದೆ. ಇದು ಪೊಲೀಸ್ ರಿಪೋರ್ಟಲ್ಲ. ಆಸ್ಕರ್ ಫರ್ನಾಂಡೀಸ್‌ರವರು ಇವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದವರು. ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಮಾನ ಮರ್ಯಾದೆಯ ಪ್ರಶ್ನೆ ಇದೆಯೆಂದು ಪತ್ರ ಬರೆದಿದ್ದಾರೆ,

SRI M. VEERAPPA MOILY.—We do not want to suppress the information. Let us known the facts. Right now we will give it to your; we do not want to support anybody.

SRI R. L. JALAPPA.—I have already assured this House that we are not protecting anybody. Immediately I came to know the fact, I asked the DIG to enquire it.

ಶ್ರೀ ಕೆ. ಎಚ್. ಪಾಟೀಲ್.—ಇಲ್ಲಿ ವ್ಯಕ್ತಿ ಮುಖ್ಯವಲ್ಲ. ಜಿಲ್ಲೆಯಲ್ಲಿರತಕ್ಕ ಅಧಿಕಾರಿ ಯಾವುದೇ ಘಟನೆಗಳು ನಡೆದರೂ ಸರಿಯಾಗಿ ಕೆಲಸಮಾಡುತ್ತಿಲ್ಲ. ಹರಿಜನ ಗಿರಿಜನರಿಗೆ ಸಂಬಂಧಪಟ್ಟ ಲ್ಯಾಂಡ್ ರೆವಿನ್ಯೂ ಕೇಸುಗಳು ಇರಬಹುದು. ಮತ್ತೊಂದು ಕೇಸು ಇರಬಹುದು. ಹಿಂದೆ ರೆವಿನ್ಯೂ ಮಂತ್ರಿ ರಾಜಯ್ಯನವರು ಕೂಡ ಈ ಅಧಿಕಾರಿ ಬಗ್ಗೆ ಹೇಳಿದ್ದರು. ಇವರು ಯಾವ ಕೇಸಿನಲ್ಲಿಯೂ ಆಕ್ಷನ್ ತೆಗೆದು ಕೊಂಡಿಲ್ಲ.

SRI R. L. JALAPPA.—We have posted a very decent and good DIG.

ಶ್ರೀ ಕೆ. ಎಚ್. ಪಾಟೀಲ್.—ನಾನು ಇವರ ಬಗ್ಗೆ ಹೇಳಲಿಲ್ಲ.

SRI M. VEERAPPA MOILY.—Sri Khasimsab...

SRI R. L. JALAPPA.—Shall I read out the letter written by Sri Oscar Fernandes? Or shall I give it to you for your reference? I am not standing here to do any humiliation. I do not want to humiliat anybody here.

ಶ್ರೀ ಎಂ. ವೀರಪ್ಪ ಮೊಯಿಲಿ.—ಅರ್ಧ ಗಂಟೆ ಚರ್ಚೆಗೆ ಹಾಕಿ ಇದರ ಬಗ್ಗೆ ಮಾತನಾಡೋಣ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಪ್ಪು ಮಾಡಿದವರಿಗೆ ಗುಂಡಿಕ್ಕಿ, We are not coming in your way. ೧೩ನೇ ತಾರೀಖು ಘಟನೆ ನಡೆದಿದೆ. ೧೬ನೇ ತಾರೀಖು ರಿಜಿಸ್ಟರ್ ಮಾಡಿದ್ದಾರೆ.

SRI R. L. JALAPPA,—If there is any lapse on the part of the Sub-Inspector, action will be taken against him I have already asked the DIG to enquire into it.